# ಮಾನವೀಯತೆ ಅತ್ಯಗತ್ಯ

'ಮಿಸ್ ಇಂಡಿಯಾ 2019' ಉತ್ತರ ಮತ್ತು ದಕ್ಷಿಣ ವಲಯದ ಮೆಂಟರ್ ಆಗಿ ನಾನು ಈ ಆವೃತ್ತಿಯಿಂದ ಹೊರಹೊಮ್ಮಲಿರುವ ಪ್ರತಿಭಾವಂತ ಸುಂದರಿಯರ ಎದುರುನೋಡುತ್ತಿದ್ದೇನೆ. ನನ್ನ ತಾಯಿ ಯಾವತ್ತೂ ಹೇಳುವ ಮಾತದು – 'ಮಾನವೀಯತೆ ಇಲ್ಲದ ಸೌಂದರ್ಯ ಕಾಡುಹೂವಿಗೆ ಸಮಾನ' ಅಂತ. ಮಾನವೀಯತೆ, ಬುದ್ಧಿವಂತಿಕೆ, ಸೌಂದರ್ಯ ಕೂಡಿದಾಗಲೇ ಅದಕ್ಕೊಂದು ಅರ್ಥ. ತಾವೇನಾಗಬೇಕು ಎನ್ನುವ ಸ್ಪಷ್ಟ ಕಲ್ಪನೆ ಇರುವ, ತಮ್ಮ ಹೃದಯ–ಮನಸ್ಸು, ಮಿದುಳು ಏನು ಹೇಳುತ್ತದೆ ಎನ್ನುವುದನ್ನು ಕೇಳಿಸಿಕೊಳ್ಳುವ ಮತ್ತು ಶ್ರದ್ಧೆಯಿಂದ ಆ ದಾರಿಯಲ್ಲಿ ಸಾಗಲು ಬಯಸುವವರನ್ನು ಗೌರವಿಸುತ್ತೇನೆ. ಹೆಣ್ತನದ ಸವಾಲುಗಳನ್ನು ಬದಿಗಿಟ್ಟು ನಿಜವಾದ ಆವಿಷ್ಕಾರಕ್ಕೆ ಹಾತೊರೆಯುವ ಮನಸ್ಸುಗಳನ್ನು ಹುಡುಕುತ್ತಿದ್ದೇನೆ.



ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

◆ **ಕಾನೂನು ಅಧ್ಯಯನಕ್ಕಾಗಿ ಬೆಂಗಳೂರು ಸೇರಬೇಕಿತ್ತು, ಆದರೆ ಅದೃಷ್ಟ ಪರೀಕ್ಷಿಸಲು ಮುಂಬೈ ದಾರಿ ಹಿಡಿದಿರಿ...**

ನಾನು ವಕೀಲೆ ಆಗಬೇಕು ಎನ್ನುವುದು ಅಮ್ಮನ ಕನಸು. ಕಾನೂನು ಅಧ್ಯಯನಕ್ಕೆ ಬೆಂಗಳೂರಿಗೆ ಬರಬೇಕಿತ್ತು. ಈ ನಡುವೆ 'ಮಿಸ್ ಇಂಡಿಯಾ 2000' ಸ್ಪರ್ಧೆಗೆ ಭಾಗವಹಿಸಲು ತಯಾರಾದೆ. ಅಮ್ಮನಿಗೆ ಒಂದಿಷ್ಟೂ ಇಷ್ಟವಿರಲಿಲ್ಲ. ಆಗ ಅಪ್ಪನೇ ಅಮ್ಮನನ್ನು ಒಪ್ಪಿಸಿದ್ದು. ಆ ವೇಳೆಗೆ ನಾನು ಡಿಪ್ರೆಶನ್‌ನಲ್ಲಿದ್ದೆ. ಸಣ್ಣ ಕ್ರಶ್ ಮನಸ್ಸನ್ನು ಘಾಸಿಗೊಳಿಸಿತ್ತು. 'ಅವಳು ಮನೆಯಿಂದ ಸ್ವಲ್ಪ ದಿನ ದೂರ ಇರಲಿ. ಹೊಸ ಅವಕಾಶಗಳು, ಹೊಸ ಜನ, ಹೊಸ ಊರು ಅವಳಿಗೆ ಹೊಸತನ ತುಂಬಬಹುದು. ಗೆದ್ದರೆ ಗೆಲ್ಲುತ್ತಾಳೆ. ಸೋತರೆ ಹೇಗೂ ಕಾನೂನು ಅಧ್ಯಯನ ಇದ್ದೇ ಇರುತ್ತದೆ' ಎಂದು ಅವರೇ ನನ್ನನ್ನು ಮುಂಬೈಗೆ ಹೊರಡಿಸಿದ್ದು.

◆ **ಹೃದಯಕ್ಕಾದ ನೋವನ್ನು ಮರೆಯಲು ಮುಂಬೈ ಸೇರಿದ್ದೇ ಇಂದು ನಿಮ್ಮನ್ನು ಇಷ್ಟು ಎತ್ತರದಲ್ಲಿ ನಿಲ್ಲಿಸಿದೆ ಎನ್ನಿ...**

ನನಗೇನೂ ಗೆಲುವಿನ ನಿರೀಕ್ಷೆ ಇರಲಿಲ್ಲ. ಸುಮ್ಮನೇ ಒಂದು ಅನುಭವ ಆಗುತ್ತದೆ ಅಂತ ಹೋಗಿದ್ದೆ. ಅಷ್ಟೊತ್ತಿಗೆ ನಾನು ಮಾಡೆಲಿಂಗ್‌ನಲ್ಲಿ ಸಾಕಷ್ಟು ಕೆಲಸ ಮಾಡಿದ್ದೆ. ಆರ್ಥಿಕವಾಗಿಯೂ ಸ್ವತಂತ್ರಳಾಗಿದ್ದೆ. ಗೆದ್ದರೆ ಗೆಲುವು, ಸೋತರೆ ಅನುಭವ ಅಂದುಕೊಂಡು ಆ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ.

◆ **ಭಾರತೀಯ ಸಿನಿಮಾ ನಿಯೋಗ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವೆ ನಡೆದ ಸಭೆಯಲ್ಲಿ ಮಹಿಳಾಶೂನ್ಯ ಪ್ರಾತಿನಿಧ್ಯದ ಬಗ್ಗೆ ಧ್ವನಿ ಎತ್ತಿದಿರಿ? ಅವರಿಂದ ಉತ್ತರ ಸಿಕ್ಕಿತೆ?**

ಇಲ್ಲ. ಈಗಲೂ ಉತ್ತರ ಸಿಕ್ಕಿಲ್ಲ. ಮಹಿಳೆಯರನ್ನು ಪರಿಗಣಿಸುವ, ಸಮಾನ ಅವಕಾಶ ನೀಡುವ ಮನಸ್ಥಿತಿಯಲ್ಲಿ ಬದಲಾವಣೆ ಆಗಬೇಕು. ಅದು ಒಂದೆರಡು ದಿನಗಳಲ್ಲಿ ಅಸಾಧ್ಯ. ನೂರಾರು ವರ್ಷಗಳಿಂದ ಬೇರುಬಿಟ್ಟ ನಂಬಿಕೆಗಳನ್ನು ಬದಲಿಸಲು ನೂರಾರು ವರ್ಷಗಳೇ ಬೇಕೇನೋ.

◆ **ನಟಿ, ನಿರ್ಮಾಪಕಿ, ಸಾಮಾಜಿಕ ಕಾರ್ಯಕರ್ತೆ, ಪರಿಸರವಾದಿ, ಒಳ್ಳೆಯ ಮಗಳು, ಆದರ್ಶ ಪತ್ನಿ – ಇವುಗಳಲ್ಲಿ ಯಾವುದಕ್ಕೆ ಮೊದಲ ಆದ್ಯತೆ?**

ಪಾತ್ರಗಳು ಹಲವು, ಮೂಲ ಉದ್ದೇಶ ಒಂದೇ. ನಟನೆ, ನಿರ್ಮಾಣ, ಸಾಮಾಜಿಕ ಕಾರ್ಯಗಳು, ಪರಿಸರ ಸಂರಕ್ಷಣೆಯ ಅಭಿಯಾನಗಳು ಎಲ್ಲದರ ಗುರಿ ಒಂದೇ, ಜನಕ್ಕೆ ಸಂದೇಶ ತಲುಪಿಸಬೇಕು. ಇನ್ನು ಒಳ್ಳೆಯ ಮಗಳು, ಆದರ್ಶ ಪತ್ನಿ... ಈ ಮಣ್ಣಿನ ಪ್ರತಿಯೊಬ್ಬ ಹೆಣ್ಣುಮಗಳ ಆದ್ಯತೆಗಳಿವು. ಎಲ್ಲಾ ಕೆಲಸವನ್ನೂ ಅಷ್ಟೇ ತನ್ಮಯತೆಯಿಂದ ಮಾಡುತ್ತೇನೆ.

◆ **ದೇಶದ ಪ್ರಮುಖ ನಗರಗಳಲ್ಲಿ ವಾಯುಮಾಲಿನ್ಯ ಅಪಾಯಕಾರಿ ಹಂತ ತಲುಪಿದೆ. ವಿಶ್ವಸಂಸ್ಥೆಯ ಪರಿಸರ ಸದ್ಭಾವನಾ ರಾಯಭಾರಿಯಾಗಿ ಇದರ ಹಿಂದಿರುವ ಕಾರಣವನ್ನು ಹೇಗೆ ವಿಶ್ಲೇಷಿಸುತ್ತೀರಿ?**

ಹಲವು ಪ್ರಕಾರಗಳಲ್ಲಿ, ಹಲವು ರೂಪಗಳಲ್ಲಿ ನಾವೇ ನಮ್ಮ ಕೈಯಾರ ಗಾಳಿಯಲ್ಲಿ ವಿಷ ಬೆರೆಸುತ್ತಿದ್ದೇವೆ. ವಾಹನಗಳು–ಕಾರ್ಖಾನೆಗಳು ಉಗುಳುವ ಹೊಗೆ, ಇ–ತ್ಯಾಜ್ಯ, ಕೃಷಿ ತ್ಯಾಜ್ಯ, ಗೃಹ ತ್ಯಾಜ್ಯಗಳನ್ನು ಸುಡುವುದರಿಂದ ಏಳುವ ಹೊಗೆ ವಾಯುಮಾಲಿನ್ಯಕ್ಕೆ ಅತಿ ಹೆಚ್ಚು ಕೊಡುಗೆ ನೀಡುತ್ತಿವೆ. ಇದರಿಂದ ನಮ್ಮ ಶ್ವಾಸಕ್ಕೆ ನಾವೇ ವಿಷ ತುಂಬಿಕೊಳ್ಳುತ್ತಿದ್ದೇವೆ ಎನ್ನುವುದು ಜನಕ್ಕೆ ಯಾಕೆ ಅರ್ಥವಾಗುತ್ತಿಲ್ಲ?

ನಮ್ಮ ಮನಸ್ಥಿತಿಗಳು ಬದಲಾಗಬೇಕಿದೆ. ನಾವು ಬದಲಾಗದ ಹೊರತು, ನಮ್ಮ ಜವಾಬ್ದಾರಿಗಳನ್ನು ಅರಿಯದ ಹೊರತು ಪರಿಸರ ಸಂರಕ್ಷಿಸುವ ಉದ್ದೇಶ ಸಾಧನೆಯಾಗದು. ಸರ್ಕಾರದ ನಿಯಮಗಳು ಕಡತಗಳಲ್ಲಿ ಉಳಿಯದೇ ಅನುಸರಣೆಗೆ ಬರಬೇಕು.

◆ **ಕಾಂಕ್ರೀಟ್ ಕಾಡಿನಲ್ಲಿ (ಅರ್ಬನ್ ಜಂಗಲ್) ನಾವು ಇನ್ನೂ ಹೆಚ್ಚು ಹೆಚ್ಚು ಸಮರ್ಥನೀಯವಾಗಿ ಬದುಕಬೇಕಾದ ಅಗತ್ಯವಿದೆ. ಅದು ಹೇಗೆ?**

ಭೂಮಿಯನ್ನು ನಮ್ಮ ದೇಹಕ್ಕೆ ಹೋಲಿಸಿಕೊಂಡಾಗ ಅದರ ಸಂಕಟ ನಮಗೆ ಅರ್ಥವಾಗಬಹುದೇನೋ? ನಮ್ಮ ಕರುಳಿಗೆ ಕರಗಿಸಲು ಸಾಧ್ಯವಾಗದ ಆಹಾರವನ್ನು ಸೇವಿಸಿದರೆ ಹೇಗಾಗುತ್ತದೆ? ಹಾಗೆಯೇ ಈ ಭೂಮಿಗೆ ಪ್ಲಾಸ್ಟಿಕ್ ಅರಗಿಸಿಕೊಳ್ಳಲಾಗದು ಅಂತ ಗೊತ್ತಿದ್ದರೂ ಪ್ಲಾಸ್ಟಿಕ್ ಬಳಕೆ ನಿಂತಿಲ್ಲ. ಅಡುಗೆ ಮನೆಯಲ್ಲೂ ಪ್ಲಾಸ್ಟಿಕ್ ತುಂಬಿಕೊಂಡಿವೆ. ನೂರು ವರ್ಷ ಬಾಳಿ–ಬದುಕಬೇಕಿರುವ ಮಕ್ಕಳಲ್ಲೂ ಇದೇ ಪರಂಪರೆ ಬಿತ್ತುತ್ತಿದ್ದೇವೆ. ಮಕ್ಕಳ ಊಟದ ಬ್ಯಾಗ್ ತೆಗೆದು ನೋಡಿ. ಹತ್ತರಲ್ಲಿ ಒಂಬತ್ತು ಮಕ್ಕಳು ಪ್ಲಾಸ್ಟಿಕ್ ಬಾಕ್ಸ್–ಬಾಟಲ್ ತಂದಿರುತ್ತಾರೆ. ಮತ್ತೆ ಪರಿಸರ ಉಳಿಸುವ ಪರಿಹಾರದ ಬಗ್ಗೆ ಮಾತಾಡುತ್ತೇವೆ...

◆ **ಜನ ನಿಮ್ಮ ಧರ್ಮದ ಬಗ್ಗೆ ಪ್ರಶ್ನಿಸಿದಾಗ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ?**

ನಾನು ಅಂಥವರನ್ನು ನಿರ್ಲಕ್ಷಿಸುತ್ತೇನೆ. ಮನುಷ್ಯ ಧರ್ಮಕ್ಕಿಂತ ದೊಡ್ಡ ಧರ್ಮ ಮತ್ತೊಂದಿದೆ ಅಂತ ನನಗೆ ಅನಿಸುವುದಿಲ್ಲ. ವ್ಯಕ್ತಿಯನ್ನು ಅವರ ವ್ಯಕ್ತಿತ್ವ–ಸ್ವಭಾವಗಳಿಂದ ಅಳೆಯಬೇಕೇ ಹೊರತು ಜಾತಿ–ಧರ್ಮಗಳಿಂದಲ್ಲ.

◆ **ಸೌಂದರ್ಯ ಸ್ಪರ್ಧೆಗಳತ್ತ ಕಣ್ಣು ನೆಟ್ಟ ಯುವರಾಣಿಯರಿಗೆ ನಿಮ್ಮ ಸಲಹೆ?**

ಯಶಸ್ಸು ಅನ್ನುವುದೊಂದು 'ಗರ್ಭಗುಡಿ' ಅಲ್ಲ. ಅಲ್ಲಿ ತಲುಪಲು ಇಂಥದ್ದೇ ಪಥ, ಮಾರ್ಗ ಅಂತಲೂ ಇಲ್ಲ. ಕಠಿಣ ಪರಿಶ್ರಮದಿಂದ ಸಾಗಬೇಕಾದ ಒಂದು ಪಯಣವದು. ನಾವು ಮಾಡುವ ಯಾವುದೇ ಕೆಲಸವನ್ನು ಶ್ರದ್ಧೆಯಿಂದ–ಪ್ರೀತಿಯಿಂದ ಮಾಡಿದಾಗ ನಮಗೆ ಆತ್ಮತೃಪ್ತಿ ಸಿಗುತ್ತದಲ್ಲ, ಅದುವೇ ಯಶಸ್ಸು. ■